ಸಂ: ಪಿಸಿಸಿಎಫ್/ಸಿ/ಜಿಎಲ್-30/2016-17

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ: 20 -08-2016

## ಸುತ್ತೋಲೆ

ವಿಷಯ: ಇಲಾಖೆಯ ವಿವಿಧ ವೃತ್ತಗಳ ವಿಭಾಗಗಳಿಗೆ ಪಾಲಿಥೀನ್ ಚೀಲ, ಪಾಲಿಥೀನ್ ಹಾಳೆಗಳು, ನೇಯ್ದ ಚೀಲಗಳು, ಮುಳ್ಳುತಂತಿ, ಚೈನ್‌ಲಿಂಕ್ ಮೆಷ್ ಮತ್ತು ಸಾದಾತಂತಿಗಳನ್ನು 2016-17ನೇ ಸಾಲಿಗೆ ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ 1. ಈ ಕಚೇರಿಯ ಇ-ಟೆಂಡರ್ ಅಧಿಸೂಚನೆ ಸಂಖ್ಯೆ: ಪಿಸಿಸಿಎಫ್ /ಸಿ/ಜಿಲ್-08/17-29/ಪಾ.ಚೀ/2016-17ದಿನಾಂಕ 08.08.2016.

2. ಈ ಕಚೇರಿಯಇ-ಟೆಂಡರ್ ಅಧಿಸೂಚನೆ ಸಂಖ್ಯೆ: ಪಿಸಿಸಿಎಫ್ /ಸಿ/ಜಿಲ್-09/ಮುಳ್ಳುತಂತಿ/2016-17 ದಿನಾಂಕ 11.08.2016

-**-

ಮೇಲಿನ ಉಲ್ಲೇಖಗಳಲ್ಲಿ 1ನೇ ನವೆಂಬರ್ 2016 ರಿಂದ 31ನೇ ಅಕ್ಟೋಬರ್ 2017ರ ಅವಧಿಯಲ್ಲಿ ಇಲಾಖೆಯ ವಿವಿಧ ವೃತ್ತಗಳ ವಿಭಾಗಗಳಿಗೆ ಪಾಲಿಥೀನ್ ಚೀಲ, ಪಾಲಿಥೀನ್ ಹಾಳೆಗಳು , ನೇಯ್ದ ಚೀಲಗಳು, ಮುಳ್ಳುತಂತಿ, ಚೈನ್‌ಲಿಂಕ್ ಮೆಷ್ ಮತ್ತು ಸಾದಾತಂತಿಗಳನ್ನು 2016-17ನೇ ಸಾಲಿಗೆ ಸರಬರಾಜು ಮಾಡುವ ಬಗ್ಗೆ ಇ-ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯಲ್ಲಿ ಆರ್ಥಿಕ ದರವನ್ನು ನಮೂದಿಸುವಾಗ ಸವಾಲುದಾರರು/ಬಿಡ್‌ದಾರರು ಅವರ ದರದಲ್ಲಿ ಎಲ್ಲಾ ತೆರಿಗೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಒಳಗೊಂಡಿರತಕ್ಕದೆಂದು ಷರತ್ತು ವಿಧಿಸಲಾಗಿದೆ. ದಿನಾಂಕ 18.08.2016 ರಂದು ನೆಡೆದ ಇ-ಟೆಂಡರ್ ಪೂರ್ವಭಾವಿ ಸಭೆಯಲ್ಲಿ ಈ ವಸ್ತುಗಳ ಮೇಲೆ ಈ ಟೆಂಡರ್ ಅವಧಿಯಲ್ಲಿ ಕೇಂದ್ರ / ರಾಜ್ಯ ಸರ್ಕಾರದಿಂದ ವಿಧಿಸಬಹುದಾದ ತೆರಿಗೆಗಳಲ್ಲಿ ವ್ಯತ್ಯಾಸವಾದಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸ್ಪಷ್ಟೀಕರಣ ನೀಡಲು ಹಲವು ಟೆಂಡರ್ / ಬಿಡ್‌ದಾರರು ಕೋರಿರುತ್ತಾರೆ.

ಮೇಲ್ಕಂಡ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಸೂಚನೆಯನ್ನು ನೀಡಲಾಗಿದೆ.

" ಟೆಂಡರ್ /ಬಿಡ್‌ದಾರರು ನಮೂದಿಸುವ ಆರ್ಥಿಕ ದರ / ಮೊತ್ತದ ಜೊತೆಗೆ ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆಯ ಮೊತ್ತಗಳನ್ನು ಮತ್ತು ನಿರ್ವಹಣಾ ವೆಚ್ಚಗಳನ್ನು ಸೇರ್ಪಡೆ ಮಾಡಿ ನಮುದಿಸುವುದು. ನಂತರದಲ್ಲಿ ಶಾಸನಬದ್ದವಾಗಿ ಯಾವುದೇ ಹೆಚ್ಚುವರಿ ತೆರಿಗೆ ಬಂದಲ್ಲಿ ಅಥವಾ ಯಾವುದೇ ತೆರಿಗೆಯ ದರದಲ್ಲಿ ಕಡಿತವಾದಲ್ಲಿ ಕಾಲಕಾಲಿಕ ತೆರಿಗೆ ದರಗಳನ್ನು ಅನ್ವಯಿಸಿಕೊಂಡು ಯಶ್ವಸಿ ಟೆಂಡರ್‌ದಾರರಿಗೆ ಟೆಂಡರ್ ಷರತ್ತು ಮತ್ತು ಒಪ್ಪಂದದ ಅನ್ವಯ ಸರಬರಾಜು ಮಾಡಿದ ವಸ್ತುಗಳಿಗೆ ಹಣ ಪಾವತಿಸಲು ಈ ಮೂಲಕ ಸೂಚಿಸಿದೆ."

**ಈ ಸೂಚನೆಯು ಉಲ್ಲೇಖದಲ್ಲಿ ತಿಳಿಸಿದ ಟೆಂಡರ್‌ಗಳಿಗೆ ಮಾತ್ರ ಅನ್ವಯವಾಗುತ್ತದೆ.**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.
**(ಅರಣ್ಯ ಪಡೆ ಮುಖ್ಯಸ್ಥರು)**

ಪ್ರತಿಯನ್ನು :-

1) ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
2) ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3) ಎಲ್ಲಾ ಬಿಡ್‌ದಾರರು/ ಸರಬರಾಜುದಾರರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

# Corrigendum for Tender Notification towards supply of Barbed wire, Chain Link Mesh& Plain Wires

**Dated 20.08.2016**

| Sl. No. | Notification No. | Condition No. | As per Notification | Read as |
|---|---|---|---|---|
| 1 | PCCF/C/GL/09/2016-17 dated 11.08.2016 | 37 | Qualified firm / suppliers in the Technical stage of Tender technical bid opened on 19.09.2016, need not upload technical bid once again. However, technical **disqualified bidders and fresh bidders** if any shall have to upload both technical and financial bids. | All intending Tenders / Bidders who are interested to participate in the re-tender shall upload **both technical and financial bids afresh.** |
| | ಪಿಸಿಸಿಎಫ್/ಸಿ/ಜಿಎಲ್–09/16–17 ದಿನಾಂಕ 11.08.2016 | 37 | ದಿನಾಂಕ 19.09.2016 ರಂದು ತಾಂತ್ರಿಕ ಸವಾಲನ್ನು ತೆರೆದಾಗ / ಡೌನ್‌ಲೋಡ್ ಮಾಡುವಾಗ, ತಾಂತ್ರಿಕ ಹಂತದಲ್ಲಿ ಅರ್ಹರಾದ ಸವಾಲುದಾರರು ಪುನ: ತಾಂತ್ರಿಕ ಸವಾಲನ್ನು ಮರು ಟೆಂಡರ್‌ನಲ್ಲಿ ನೀಡುವ ಅವಶ್ಯಕತೆ ಇರುವುದಿಲ್ಲ. ಆದರೆ, ಈ ತಾಂತ್ರಿಕ ಹಂತದಲ್ಲಿ ಅನರ್ಹರಾದ ಅಥವಾ ಹೊಸದಾಗಿ ಭಾಗವಹಿಸಲು ಇಚ್ಛಿಸುವ ಸವಾಲುದಾರರು ತಾಂತ್ರಿಕ ಮತ್ತು ಆರ್ಥಿಕ ಸವಾಲುಗಳನ್ನು ನೀಡಬೇಕು. | ಮರು ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವ ಎಲ್ಲಾ ಟೆಂಡರ್‌ದಾರರು / ಬಿಡ್‌ದಾರರು **ಹೊಸದಾಗಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ತಪ್ಪದೇ ಅಪ್‌ಲೋಡ್ ಮಾಡಬೇಕು.** |

**Addl. Principal Chief Conservator of Forests,**
**(Communication and Information)**